MYSORE LEGISLATIVE ASSEMBLY.

THIRTY-SIXTH DAY.

Thursday, 7th April 1955.

The House met in the Assembly Hall, Old Public Offices, Bangalore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS

Untouchability (Advisory Committees for Eradication).

Q.—854. Sri B. T. KEMPARAJ (Bangalore South-Scheduled Castes).—Will the Government be pleased to state :—

(*a*) when the advisory committees for eradication of untouchability were constituted at the District and Taluk levels ;

(*b*) who constituted these committees ?

A.—Sri K. HANUMANTHAIYA (Chief Minister).—

(*a*) The District and Taluk Advisory Committees in the several Districts except Bellary were constituted in September 1954. The Committees in Bellary District were constituted in October 1954.

(*b*) Government.

ಶ್ರೀ ಬಿ. ಟಿ. ಕೆಂಪರಾಜ್.—ಈ ಸಮಿತಿಗಳನ್ನು ರಚನೆಮಾಡುವುದಕ್ಕೆ ಸಲಹೆ ಕೊಟ್ಟವರು ಯಾರು ?

*ಶ್ರೀ ಕೆ. ಹನುಮಂತಯ್ಯ.—ಡಿಪ್ರೆಸ್ಡ್ ಕ್ಲಾಸ್ ಕಮಿಷನರು.

ಶ್ರೀ ಬಿ. ಟಿ. ಕೆಂಪರಾಜ್.—ಅವರು ಆಯಾ ತಾಲ್ಲೂಕುಗಳ ಅಮಲ್ದಾರರು ಮತ್ತು ಡೆಪ್ಯುಟಿ ಕಮಿಷನರುಗಳನ್ನು consult ಮಾಡಿ ಈ ಸಮಿತಿಯ ಸದಸ್ಯರನ್ನು ನೇಮಕಮಾಡಲು ಸಲಹೆ ಮಾಡಿದ್ದಾರೆಯೇ ?

ಶ್ರೀ ಕೆ. ಹನುಮಂತಯ್ಯ.—ಹಾಗೆ ಎಲ್ಲರನ್ನೂ ವೈಯಕ್ತಿಕವಾಗಿ ಸಲಹೆಕೇಳಿ ಮಾಡುವುದಕ್ಕೆ ಆಗುವುದಿಲ್ಲ. ಸಾಧ್ಯವಾದಷ್ಟೂ ಅಭಿಪ್ರಾಯ ಶೇಖರಿಸಿಕೊಂಡು ಕಮಿಟಿಗಳನ್ನು ಮಾಡಿದೆ.

ಶ್ರೀ ಬಿ. ಟಿ. ಕೆಂಪರಾಜ್.—ಈ ಕಮಿಟಿಗಳನ್ನು ರಚನೆಮಾಡುವಾಗ ಆಯಾ ಕ್ಷೇತ್ರದ ಶಾಸನ ಸಭಾ ಸದಸ್ಯರ ಅಭಿಪ್ರಾಯವನ್ನು ಡಿಪ್ರೆಸ್ಡ್‌ಕ್ಲಾಸ್ ಕಮಿಷನರು ಕೇಳಿದ್ದಾರೆಯೇ ?

ಶ್ರೀ ಕೆ. ಹನುಮಂತಯ್ಯ.—ಅದು ನನಗೆ ಗೊತ್ತಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಅಸ್ಪೃಶ್ಯತೆಯನ್ನು ನಿರ್ಮೂಲ ಮಾಡಲಕ್ಕೆ ರಚಿಸಿರುವ ಸಮಿತಿಗಳಲ್ಲಿ ಸವರ್ಣೀಯರೂ ಇದ್ದಾರೆಯೇ ?

ಶ್ರೀ ಕೆ. ಹನುಮಂತಯ್ಯ.—ಇದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಈ ಸಮಿತಿಯ ಕೆಲಸಕಾರ್ಯಗಳೇನು ಎಂಬುದನ್ನು ಸರ್ಕಾರದವರು ನಿಗದಿಮಾಡಿದ್ದಾರೆಯೇ ?

ಶ್ರೀ ಕೆ. ಹನುಮಂತಯ್ಯ.—ನೀವೇ ಹೇಳಿದ್ದೀರಲ್ಲಾ, ಅಸ್ಪೃಶ್ಯತೆ ನಿವಾರಣೆ ಮಾಡುವುದು.

ಶ್ರೀ ಎಸ್. ಗೋಪಾಲಗೌಡ.—ಅವರಿಗೆ ಏನಾದರೂ ಈರೀತಿ ನಡೆದುಕೊಳ್ಳಬೇಕು ಎಂಬ ನಿರ್ದಿಷ್ಟವಾದ ಕಾರ್ಯಕ್ರಮ ಇದೆಯೇ ? ಅದಕ್ಕೆ ಸರ್ಕಾರದವರು ಹಣಕಾಸನ್ನೇನಾದರೂ ಒದಗಿಸುತ್ತಾ ಇದ್ದೀರಾ ?

ಶ್ರೀ ಕೆ. ಹನುಮಂತಯ್ಯ.—ಹಣಕಾಸನ್ನು ಕೊಟ್ಟಿದೆ. ಈ ಕೆಲಸಕಾರ್ಯಗಳನ್ನು ಅವರೇ ಏನಾದರೂ ಆಗಿ ಸಮಾಲೋಚನೆಮಾಡಿ ನಿರ್ಧರಿಸಬೇಕು.

ಶ್ರೀ ಕೆ. ಲಕ್ಕಪ್ಪ.—ಈ ಕಮಿಟಿಗಳು ಆಗಿಂದಾಗ್ಗೆ meet ಆಗುತ್ತಾ ಇವೆಯೇ ?

ಶ್ರೀ ಕೆ. ಹನುಮಂತಯ್ಯ.—ಆಗುತ್ತಾ ಇವೆ.

ಶ್ರೀ ಕೆ. ಲಕ್ಕಪ್ಪ.—ವರ್ಷಕ್ಕೆ ಎಷ್ಟು ಸಾರಿ ?

ಶ್ರೀ ಕೆ. ಹನುಮಂತಯ್ಯ.—ಅದು ಅವರಿಗೆ ಸಂಬಂಧಪಟ್ಟಿದ್ದು.

ಶ್ರೀ ಕೆ. ಲಕ್ಕಪ್ಪ.—ಈ ಕಮಿಟಿಗಳನ್ನು ರಚನೆ ಮಾಡಿದ ಮೇಲೆ ಏನು ಸಾಧನೆ ಮಾಡಿದ್ದಾರೆ ?

Sri K. HANUMANTHAIYA.—I must get the information from the Committees what work they have done and I will furnish. ಪ್ರತ್ಯೇಕವಾದ ಪ್ರಶ್ನೆ ಕೇಳಿ ಉತ್ತರ ಕೊಡುತ್ತೇನೆ.

ಶ್ರೀ ಆರ್. ಮುನಿಸ್ವಾಮಯ್ಯ.—ಅನೇಕ ತಾಲ್ಲೂಕುಗಳಲ್ಲಿ ಈ ಕಮಿಟಿ ಮೀಟಿಂಗ್ ನಡೆದೇ ಇಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹನುಮಂತಯ್ಯ.—ಇದುವರೆಗೂ ಆ ಕಮಿಟಿ ಮೀಟಿಂಗ್‌ಗಳು ನಡೆದಿಲ್ಲ ಎಂದು ಹೇಳಿ ನನ್ನ ಗಮನಕ್ಕೆ ಯಾರೂ ತಂದಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಸಮಿತಿಗಳನ್ನು ನೇಮಿಸುವಾಗ ಅವರಿಗೆ ಇಷ್ಟಬಂದ ಸದಸ್ಯರನ್ನು ನೇಮಕಮಾಡುವುದರಿಂದ ಆ ಮೆಂಬರುಗಳು ಮೀಟಿಂಗಿಗೆ ಬರುವುದೇ ಇಲ್ಲ ಎಂಬುದು ಗೊತ್ತೇ ?

* Indicates that the remarks or speeches have not been revised by the Member concerned.

ಶ್ರೀ ಕೆ. ಹನುಮಂತಯ್ಯ.—ಯಾವ ಕಮಿಟಿಯನ್ನು ರಚನೆ ಮಾಡಿದರೂ ಇಷ್ಟಬಂದವರನ್ನು ಹಾಕುತ್ತಾರೆ ಎಂಬುದು ಬಂದೇ ಬರುತ್ತದೆ. ಆದ್ದರಿಂದ ಆ ತರಹ ಆರೋಪಣೆಗಳಿಂದ ಪ್ರಯೋಜನವಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಎಂ: ಎಲ್: ಎ. ಗಳನ್ನು consult ಮಾಡಿ ಅಮಲ್ದಾರರುಗಳು ಸಾಕಾದಷ್ಟು ಆನಕ್ಕೆ ಇರತಕ್ಕವರ ಹೆಸರುಗಳನ್ನು ಕೊಟ್ಟಿದ್ದ ಪಕ್ಷದಲ್ಲಿ ಈ ನಮಿತಿಗಳ ಮೀಟಿಂಗುಗಳು ನರಿಯಾಗಿ ನಡೆಯುತ್ತಾ ಇದ್ದವು ಎಂಬುದು ಗೊತ್ತೇ!

ಶ್ರೀ ಕೆ. ಹನುಮಂತಯ್ಯ.—ಆತರಹ ಎಂ.ಎಲ್.ಎ. ಗಳನ್ನು ಕೇಳಬೇಕಾಗಿ ನಿಯಮ ಮಾಡುವುದು ಕಷ್ಟ.

ಶ್ರೀ ಆರ್. ಮುನಿಸ್ವಾಮಯ್ಯ.—ಹಾಗಾದರೆ ಡಿಪ್ರೆಸ್ಡ್ ಕ್ಲಾಸ್ ಕಮಿಷನರಿಗೆ ಅವರು ಯಾವ ರೀತಿ ಹೆಸರುಗಳನ್ನು ಕೊಟ್ಟಿದ್ದಾರೆ?

ಶ್ರೀ ಕೆ. ಹನುಮಂತಯ್ಯ.—ಅದು ಅವರ ವಿವೇಚನೆಗೆ ಬಿಟ್ಟಿದ್ದು.

ಶ್ರೀ ಆರ್. ಮುನಿಸ್ವಾಮಯ್ಯ.—ಈ ನಮಿತಿಗಳು ಯಾವಯಾವಾಗ ಸೇರಬೇಕೆಂದು ತಿಳಿಸಿರುತ್ತೀರಿ?

ಶ್ರೀ ಕೆ. ಹನುಮಂತಯ್ಯ.—ಅದು ಗೌರ್ನಮೆಂಟ್ ಆರ್ಡರ್‌ನಲ್ಲಿ ಇರಬೇಕು. The Committee may meet as often as necessary. But not less than four meetings should be held in a year. I will find out and tell you.

ಶ್ರೀ ಆರ್. ಮುನಿಸ್ವಾಮಯ್ಯ.—ಸಾಧ್ಯವಾದಷ್ಟು ಜಾಗ್ರತೆ ಈ ನಮಿತಿಗಳನ್ನು ಪುನಃರಚನೆ ಮಾಡಿ ಇದರಲ್ಲಿ ಆನಕ್ಕೆಯುಳ್ಳ ಹೊಸ ಸದಸ್ಯರನ್ನು ನೇಮಕ ಮಾಡಲು ಯೋಚನೆ ಮಾಡುತ್ತೀರಾ?

ಶ್ರೀ ಕೆ. ಹನುಮಂತಯ್ಯ.—ಈಗಿರತಕ್ಕ ಸದಸ್ಯರಿಗೆ ಆನಕ್ಕೆ ಇದೆ. ಆ ಆಧಾರದ ಮೇಲೆ ಈ ನಮಿತಿಗಳನ್ನು ರಚಿಸಿರುವುದು. ಹಾಗೆ ಯಾರಾದರೂ ಮೀಟಿಂಗಿಗೆ ಬರದೇ ಆನಕ್ಕೆವಹಿಸದಿದ್ದರೆ ಅಂಥವರನ್ನು ತೆಗೆದು ಹೊಸಬರನ್ನು ನೇಮಕಮಾಡಬಹುದು.

ಶ್ರೀ ಎಚ್. ಹುಚ್ಚಮಾಸ್ತಿಗೌಡ.—ಈ ತಾಲ್ಲೂಕು ಡೆವಲಪ್‌ಮೆಂಟ್ ಕಮಿಟಿಗಳು ರಚನೆ ಆದಮೇಲೆ ಈ ಈ ಕೆಲಸವನ್ನು ಆ ನಮಿತಿಗಳಿಗೆ ವಹಿಸಿ ಇವುಗಳನ್ನು ವಜಾ ಮಾಡುತ್ತೀರಾ?

Sri K. HANUMANTHAIYA.—That is a hypothetical question.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈ ನಮಿತಿಗಳಲ್ಲಿ ಒಂದು ಹೋಬಳಿಯಿಂದ ಹೆಚ್ಚು ಜನ ಮೆಂಬರುಗಳನ್ನು ತೆಗೆದುಕೊಂಡು, ಮತ್ತೆ ಕೆಲವು ಹೋಬಳಿಗಳನ್ನು ಪೂರ್ತಿಯಾಗಿ ಬಿಟ್ಟಿರುವುದು ಗೊತ್ತೇ?

ಶ್ರೀ ಕೆ. ಹನುಮಂತಯ್ಯ.—ಹಾಗೆ ಆದರೂ ಪರವಾಗಿಲ್ಲ. ಕೆಲಸ ಆಗಬೇಕಾದದ್ದು ಮುಖ್ಯವೇ ಹೊರತು ದಾಮಾಷಾ ಪ್ರಕಾರ ಎರಡಾ ಹೋಬಳಿಗಳಿಗೂ ಕೊಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಒಂದು ಸಾರಿ ಕಮಿಟಿ ಮೆಂಬರುಗಳನ್ನು ಚುನಾಯಿಸಿ ಗೆಜೆಟ್ ನೋಟಿಫಿಕೇಷ್ ಬಂದು, ಒಂದು ಮೀಟಿಂಗ್ attend ಮಾಡಿದ ಮೇಲೆ ಕೆಲವರನ್ನು remove ಮಾಡಿರುವುದು ಗೊತ್ತೇ?

ಶ್ರೀ ಕೆ. ಹನುಮಂತಯ್ಯ.—ಅವರು ಮುಂದಿನ ಕೆಲವು ಮೀಟಿಂಗುಗಳಿಗೆ ಹೋಗದೇ ಇದ್ದಿದ್ದರೆ ಅರೀತಿ ಮಾಡಿರಬಹುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—Representationನ್ನೇ remove ಮಾಡಿದ್ದಾರೆ, without asigning any reason. ಅದು ತಮ್ಮ ಗಮನಕ್ಕೆ ಬಂದಿಲ್ಲವೇ?

ಶ್ರೀ ಕೆ. ಹನುಮಂತಯ್ಯ.—ಅಂಥದು ಯಾವುದೂ ಗೊತ್ತಿಲ್ಲ.

ಶ್ರೀ ಪಿ. ಆರ್. ರಾಮಯ್ಯ.—ಈ ಕಮಿಟಿಗಳು ಮಾಡುತ್ತಿರುವ ಕೆಲಸದ ವಿಷಯವಾಗಿ ಸರ್ಕಾರದವರಿಗೆ ವರದಿ ಕ್ರಮವಾಗಿ ಬರುತ್ತಾ ಇದೆಯೇ?

ಶ್ರೀ ಕೆ. ಹನುಮಂತಯ್ಯ.—ವರ್ಷಕ್ಕೆ ಒಂದುಸಾರಿ ವರದಿ ತರಿಸಿಕೊಳ್ಳುವುದು ಪದ್ಧತಿ.

ಶ್ರೀ ಎಚ್. ಸಿ. ಲಿಂಗಾರೆಡ್ಡಿ.—ಈ ಅಸ್ಪೃಶ್ಯತಾ ನಿವಾರಣಾ ಕಾರ್ಯಕ್ರಮಕ್ಕೆ ಇಂಡಿಯಾ ಸರ್ಕಾರದವರು ಹಣ ಕೊಡುತ್ತಾರೆಯೇ?

ಶ್ರೀ ಕೆ. ಹನುಮಂತಯ್ಯ.—ಅವರೂ ಸ್ವಲ್ಪ ಕೊಡುತ್ತಾರೆ.

ಶ್ರೀ ಎಚ್ ಸಿ. ಲಿಂಗಾರೆಡ್ಡಿ.—ಎಷ್ಟು ಕೊಡುತ್ತಾರೆ?

ಅಧ್ಯಕ್ಷರು.—ಹೋದಸಲ ಈ ಪ್ರಶ್ನೆ ಬಂದಿತ್ತು.

ಶ್ರೀ ವಿ. ಆರ್. ನಾಯ್ಡು.—ಈ ಅಸ್ಪೃಶ್ಯತಾ ನಿರ್ಮೂಲ ನಮಿತಿಗಳು ಏರ್ಪಾಡಾದಮೇಲೆ ಒಳ್ಳೆಯದಾಗಿದೆ ಅಲ್ಲವೇ?

ಶ್ರೀ ಕೆ. ಹನುಮಂತಯ್ಯ.—ಒಳ್ಳೆಯದಾಗಿದೆ.

Chokkanahalli Village Extension (Lands acquired).

Q.—839. Sri K. V. BYRE GOWDA (Bangalore North).—

Will the Government be pleased to state :—

(*a*) the Survey Numbers that were acquired and taken possession of for the extension of Chokkanahalli village, Yalahanka Hobli, Bangalore North Taluk, within the past six months;

(*b*) the extent acquired;

(*c*) owners of the acquired lands?

A.—Sri T. CHANNIAH (Minister for Public Health and Local Self-Government).—

(*a*) 105 and 106.

(*b*) One acre.

(*c*) S. No. 105 is in the *khate* and *anubhava* of Sri Muninarasimha Reddy while S. No. 106 is in the *khate* of Sri Anjaneyaswamy Devaru and in the *anubhava* of the Archak Sri Narayanappa.

ಶ್ರೀ ಕೆ. ವಿ. ಬೈರೇಗೌಡ.—ಈ ಸರ್ವೇ ನಂಬರುಗಳನ್ನು ಅಕ್ವೈರ್ ಮಾಡಿಕೊಂಡದ್ದು ಯಾವಾಗ?